**ಅ.ದಾವಾ ನಂ. 97/2019** **ಪಿ.ಡಬ್ಲ್ಯೂ-1**

**ದಿನಾಂಕ 04/01/2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.**

**ಮುಂದುವರಿದ ಪಾಟೀ ಸವಾಲುಃ ಶ್ರೀ ಹೆಚ್.ಆರ್.ಜೆ. ವಕೀಲರಿಂದ**

ನಾನು ಪ್ರತಿವಾದಿಗೆ 26.02.2019 ರಂದು ನಮ್ಮ ವಕೀಲರ ಮುಖಾಂತರ ತಿಳುವಳಿಕೆ ಪತ್ರ ನೀಡಿದ್ದೆ. ಸದರಿ ತಿಳುವಳಿಕೆ ಪತ್ರ ಏನಾಯಿತು ಎಂದು ತಿಳಿದುಕೊಂಡಿದ್ದೀರೆ ಎಂಬ ಪ್ರಶ್ನೆಗೆ ಸಾಕ್ಷಿ ಹೇಳುತ್ತಾರೆ ನನ್ನ ವಕೀಲರನ್ನು ನಾನು ಕೇಳಿದಾಗ ಪ್ರತಿವಾದಿಯಿಂದ ಯಾವುದೇ ಪ್ರತಿಕ್ರಿಯೆ ಬಂದಿರುವುದಿಲ್ಲ ಎಂದು ಹೇಳಿರುತ್ತಾರೆ. ನನ್ನ ಹಾಗೂ ಪ್ರತಿವಾದಿಯ ನಡುವೆ ಯಾವುದೇ ಹಣಕಾಸಿನ ವ್ಯವಹಾರ ನಡೆದಿಲ್ಲ ಎಂದರೆ ಸರಿಯಲ್ಲ.

2. ಪ್ರತಿವಾದಿ ನಿವೃತ್ತ ಶಿಕ್ಷಕರಾಗಿದ್ದು ನನ್ನ ಬಳಿ ಸಾಲ ಪಡೆಯುವ ಪ್ರಮೇಯವೇ ಬರಲಿಲ್ಲ ಎಂದರೆ ಸರಿಯಲ್ಲ. ನನ್ನ ಕಟಿಂಗ್ ಶಾಪ್ ನಿಂದ ಬರುವ ಆದಾಯ ನನಗೆ ಸಾಕಾಗುತ್ತಿದ್ದು, ಒಂದು ಲಕ್ಷದಷ್ಟು ಸಾಲ ಪ್ರತಿವಾದಿಗೆ ನೀಡುವ ಆರ್ಥಿಕ ಸಾಮರ್ಥ್ಯತೆ ನನಗಿರಲಿಲ್ಲ ಎಂದರೆ ಸರಿಯಲ್ಲ. ನನ್ನ ಹಾಗೂ ಪ್ರತಿವಾದಿಯ ನಡುವೆ ಯಾವುದೇ ಹಣಕಾಸಿನ ವ್ಯವಹಾರ ಆಗದೇ ಇದ್ದರೂ ಅಕ್ರಮ ಲಾಭ ಹೊಂದಲು ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

**ಬಹಿರಂಗ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.**

**ಓ.ಹೇ.ಕೇ.ಸ.ಇ.**

**ಜೆಎಂಎಫ್‌ಸಿ., ಹೊಳೆನರಸೀಪುರ.**